<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.</u>

<u>ಸಿ.ಸಿ. ಸಂಖ್ಯೆ.**262/2023**</u>

| | | |
|---|---|---|
| ಸಾಕ್ಷಿದಾರರ ಹೆಸರು | ಃ ಶಿವ | ಸಿ.ಡಬ್ಲ್ಯೂಃ 4 ಪಿ.ಡಬ್ಲ್ಯೂಃ 3 |
| ತಂದೆಯ ಹೆಸರು | ಃ ರಂಗೇಗೌಡ | |
| ವಯಸ್ಸು | ಃ 55 ವರ್ಷ | |
| ಉದ್ಯೋಗ | ಃ ವ್ಯವಸಾಯ | |
| ವಾಸಸ್ಥಳ | ಃ ವಾಲೆ ಕರಟ್ಟಿ | |

ದಿನಾಂಕಃ 12.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಖ್ಯ ವಿಚಾರಣೆ ಸ.ಸ.ಅ.ರವರಿಂದಃ</u>**

1. ನ್ಯಾಯಾಲಯದ ಮುಂದಿರುವ ಆರೋಪಿಯು ನನಗೆ ಪರಿಚಯ ಇರುತ್ತಾರೆ. ಆರೋಪಿಯು ಗೋಣಿಬೀಡು ನಿವಾಸಿಯಾಗಿರುತ್ತಾರೆ. ಈಗ ನನಗೆ ತೋರಿಸಿದ ಅಮಾನತ್ತು ಮಹಜರ್ ನಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಮಹಜರ್ ನ್ನು ನಿ.ಪಿ.6 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು. ನಿ.ಪಿ.6 ದಾಖಲೆಗೆ ನಾನು ದಿಃ 17.07.2022 ರಂದು 1.00 ರಿಂದ 3.00 ಗಂಟೆಯ ಅವಧಿಯಲ್ಲಿ ಮಹಜರ್ ಕಾಲದಲ್ಲಿ ಸಹಿ ಮಾಡಿರುತ್ತೇನೆ. ಸದರಿ ಸಮಯದಲ್ಲಿ ಚಾಸಾ.5 ಮತ್ತು 6 ರವರು ಹಾಜರಿದ್ದರು. ಈಗ ನನಗೆ ತೋರಿಸಿದ ಛಾಯಚಿತ್ರದಲ್ಲಿ ನಾನು ಹಾಜರಿರುತ್ತೇನೆ. ಛಾಯಚಿತ್ರವನ್ನು ನಿ.ಪಿ.7 ಎಂದು ಗುರುತಿಸಲಾಯಿತು. ಆರೋಪಿಯ ಮೊಬೈಲ್ ಪೋನ್ ನ್ನು ಅಮಾನತ್ತು ಪಡಿಸಿಕೊಳ್ಳುವ ಕಾಲದಲ್ಲಿ ನಿ.ಪಿ.7 ಛಾಯಚಿತ್ರವನ್ನು ಪೊಲೀಸರು ನನ್ನ ಸಮಕ್ಷಮ ತೆಗೆದಿರುತ್ತಾರೆ. ಈಗ ನನಗೆ ತೋರಿಸಿದ ಸ್ಥಳ ಮಹಜರ್ ನಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಮಹಜರ್ ನ್ನು ನಿ.ಪಿ.8 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.8(ಎ) ಎಂದು ಗುರುತಿಸಲಾಯಿತು. ನಿ.ಪಿ.8 ದಾಖಲೆಗೆ ಸಂಜೆ 4.00 ರಿಂದ 5.00 ಗಂಟೆ ಸಮಯದಲ್ಲಿ ದಿಃ 17.07.2022 ರಂದು ಹಾಕಿರುತ್ತೇನೆ. ನಿ.ಪಿ.8 ದಾಖಲೆಗೆ ನಾನು ಸಹಿ ಮಾಡುವ ಸಮಯದಲ್ಲಿ ಚಾಸಾ.5 ಮತ್ತು 6 ರವರು ಹಾಜರಿದ್ದರು. ಈಗ ನನಗೆ ತೋರಿಸಿದ 4 ಛಾಯಚಿತ್ರಗಳಲ್ಲಿ

ನಾನು ಹಾಜರಿರುತ್ತೇನೆ. ಛಾಯಚಿತ್ರಗಳನ್ನು ನಿ.ಪಿ.9 ರಿಂದ 12 ಎಂದು ಗುರುತಿಸಲಾಯಿತು. ನಿ.ಪಿ.9 ರಿಂದ 12 ಛಾಯಚಿತ್ರಗಳನ್ನು ಆರೋಪಿಯ ಮನೆಯಲ್ಲಿ ಹಣ ಅಮಾನತ್ತು ಪಡಿಸಿಕೊಳ್ಳುವ ಸಮಯದಲ್ಲಿ ತೆಗೆದಿರುವ ಛಾಯಚಿತ್ರವಾಗಿರುತ್ತದೆ. ನಿ.ಪಿ.2 ಮಹಜರ್ ನಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ನಿ.ಪಿ.2 ರಲ್ಲಿ ಇರುವ ಸಹಿಯನ್ನು ನಾನು ದಿಃ 30.07.2022 ರಂದು ಹಾಕಿರುತ್ತೇನೆ. ಎಷ್ಟು ಗಂಟೆಗೆ ನಿ.ಪಿ.2 ದಾಖಲೆಗೆ ನಾನು ಸಹಿ ಮಾಡಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ನಿ.ಪಿ.2 ಮಹಜರ್ ಗೆ ಸಹಿ ಮಾಡುವ ಸಮಯದಲ್ಲಿ ನನ್ನ ಜೊತೆ ಚಾಸಾ.1 ಮತ್ತು 6 ರವರು ಹಾಜರಿದ್ದರು. ನಿ.ಪಿ.3 ಮತ್ತು 4 ಛಾಯಚಿತ್ರದಲ್ಲಿ ನಾನು ಹಾಜರಿರುತ್ತೇನೆ. ನ್ಯಾಯಾಲಯದ ಆದೇಶದ ಮೇರೆಗೆ ಹಣ ಬಿಡುಗಡೆ ಮಾಡಿ ಠಾಣೆಯಿಂದ ಪಡೆಯುವ ಸಮಯದಲ್ಲಿ ನಿ.ಪಿ.3 ಮತ್ತು 4 ಛಾಯಚಿತ್ರವನ್ನು ಪೊಲೀಸರು ತೆಗೆದಿರುತ್ತಾರೆ. ಈಗ ನನಗೆ ತೋರಿಸಿದ ನೋಟೀಸುಗಳಲ್ಲಿ ಇರುವ ಸಹಿಗಳು ನನ್ನದೇ ಇರುತ್ತದೆ. ನೋಟೀಸುಗಳನ್ನು ನಿ.ಪಿ.13 ಮತ್ತು 14 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.13(ಎ) ಮತ್ತು ನಿ.ಪಿ.14(ಎ) ಎಂದು ಗುರುತಿಸಲಾಯಿತು. ಶಾಲೆಯ ಅಕ್ಷರ ದಾಸೋಹದ ಹಣವನ್ನು ಆರೋಪಿಯು online ಮೂಲಕ ಆತನ ಖಾತೆಗೆ ವರ್ಗಾವಣೆ ಮಾಡಿರುತ್ತಾನೆ. ಆ ಕಾರಣದಿಂದ ಸದರಿ ಮಹಜರ್ ನ್ನು ಮಾಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸ.ಸ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು ಸ.ಸ.ಅ. ರವರಿಂದ**

2. ನಿ.ಪಿ.6 ಮಹಜರ್ ನ್ನು ದಿಃ 17.07.2022 ರಂದು 3.00 ರಿಂದ 4.00 ಗಂಟೆ ಸಮಯದಲ್ಲಿ ಮಾಡಿರುತ್ತಾರೆ ಎಂದರೆ ಸರಿ. ನಿ.ಪಿ.6 ದಾಖಲೆಗೆ ನನ್ನ ಜೊತೆ ಚಾಸಾ.5 ರವರು ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿ.ಪಿ.8 ಮಹಜರ್ ನ್ನು ದಿಃ 17.07.2022 ರಂದು ಸಂಜೆ 4.30 ರಿಂದ 5.30 ಗಂಟೆ ವರೆಗೆ ಮಾಡಿರುತ್ತಾರೆ

ಎಂದರೆ ಸರಿ. ನಿ.ಪಿ.8 ಮಹಜರ್ ಮಾಡುವ ಸಮಯದಲ್ಲಿ ಚಾಸಾ.5 ರವರು ನನ್ನ ಜೊತೆ ಹಾಜರಿದ್ದರು ಎಂದರೆ ಸರಿ. ದಿಃ 30.07.2022 ರಂದು ಮಾಡಿರುವ ನಿ.ಪಿ.2 ಮಹಜರ್ ನ್ನು ಮಧ್ಯಾಹ್ನ 1.00 ರಿಂದ 1.30 ಗಂಟೆ ವರೆಗೆ ಪೊಲೀಸರು ಮಾಡಿರುತ್ತಾರೆ ಎಂದರೆ ಸರಿ. ನಿ.ಪಿ.2 ಮಹಜರ್ ಆಗುವ ಸಮಯದಲ್ಲಿ ನನ್ನ ಜೊತೆ ಚಾಸಾ.6 ರವರು ಹಾಜರಿದ್ದರು ಎಂದರೆ ಸರಿ. ನಿ.ಪಿ.2 ಮಹಜರ್ ಮೂಲಕ ಹಣವನ್ನು ಠಾಣೆಯಿಂದ ಚಾಸಾ.2 ರವರು ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿ. ಈ ಪ್ರಕರಣದ ಎಲ್ಲಾ ವಿಚಾರವನ್ನು ಚಾಸಾ.1 ರವರು ನನಗೆ ತಿಳಿಸಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲು ಶ್ರೀ ಡಿ.ಕೆ.ಪಿ. ವಕೀಲರಿಂದ – ಆರೋಪಿತನ ಪರವಾಗಿ</u>

3. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿನಾಂಕ : 12.02.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಕೆ.ಎಂ.ಪಿ ವಕೀಲರಿಂದ – ಆರೋಪಿತನ ಪರವಾಗಿ

4. ಚಾಸಾ-1 ರವರು ನನಗೆ 10-15 ವರ್ಷಗಳಿಂದ ಪರಿಚಯ ಇರುತ್ತಾರೆ. ನಾನು ವಾಲೇಕರಟ್ಟಿಯ ನಿವಾಸಿಯಾಗಿರುತ್ತೇನೆ. ವಾಲೇಕರಟ್ಟಿಯಿಂದ ಗೋಣಿಬೀಡುವಿಗೆ 1 ಕಿ.ಮೀ. ಅಂತರ ಇರುತ್ತದೆ. ನಾನು ಎಲ್. ಐ. ಸಿ. ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದೇನು ಎಂದರೆ ಸರಿ. ನನ್ನ ಜಮೀನು ವಾಲೇಕರಟ್ಟಿಯಲ್ಲಿ ಇರುತ್ತದೆ ಎಂದರೆ ಸರಿ. ಆರೋಪಿಯು ನನಗೆ ಚಿಕ್ಕಂದಿನಿಂದಲೂ ಪರಿಚಯ ಇರುತ್ತಾರೆ. ಆರೋಪಿಯು ಗೋಣಿಬೀಡು ಶಾಲೆಯ ಹತ್ತಿರದಲ್ಲಿಯೇ ತರಕಾರಿ ಅಂಗಡಿಯನ್ನು ಇಟ್ಟುಕೊಂಡಿರುತ್ತಾರೆ ಎಂದರೆ ಸರಿ. ನಾನು 2014 ರಲ್ಲಿ ಗೋಣಿಬೀಡು ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷನಾಗಿದ್ದೇನು ಎಂದರೆ ಸರಿ. 2014 ರಿಂದ ಇಂದಿನವರೆಗೂ ನಾನು ಗೋಣಿಬೀಡು ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷನಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ಗೋಣಿಬೀಡು ಸರ್ಕಾರಿ ಶಾಲೆಗೆ ಎಸ್.ಡಿ.ಎಂ.ಸಿ. ಇರುತ್ತದೆ ಎಂದರೆ ಸರಿ. ಹಳೆ ವಿದ್ಯಾರ್ಥಿ ಸಂಘ ಮತ್ತು ಎಸ್.ಡಿ.ಎಂ.ಸಿ.ಬೇರೆ ಬೇರೆ ಎಂದರೆ ಸರಿ. ಹಳೆ ವಿದ್ಯಾರ್ಥಿ ಸಂಘದವರು ಶಾಲೆಯಲ್ಲಿ ಕಾರ್ಯಕ್ರಮವನ್ನು ನಿರೂಪಿಸುತ್ತಾರೆ ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ದಾಖಲಾತಿಗೆ ಸಹಿಯನ್ನು ಮಾಡಿರುತ್ತೇನೆ. ನಾನು ಈ ಪ್ರಕರಣದಲ್ಲಿ ಪೊಲೀಸ್ ದಾಖಲಾತಿಗೆ ಎರಡು ಸಹಿಗಳನ್ನು ಹಾಕಿರುತ್ತೇನೆ. ಸದರಿ ಸಹಿಗಳನ್ನು ನಾನು ಒಂದೇ ಸ್ಥಳದಲ್ಲಿ ಹಾಕಿರುತ್ತೇನೆ. ನಾನು ಪೊಲೀಸರು ತೋರಿಸಿರುವ ದಾಖಲಾತಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ದಿನಾಂಕ 16.07.2022 ರಂದು ಚಾಸಾ-1 ರವರ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರವಾಣಿಯಲ್ಲಿ ನನ್ನ ಜೊತೆ ಮಾತನಾಡಿರುತ್ತಾರೆ.

5. ಚಾಸಾ-1 ರವರಿಗೆ ಈ ಪ್ರಕರಣದಲ್ಲಿ ಏನು ಮಾಡಬೇಕು ಎಂದು ಸಲಹೆ ನೀಡಿರುವುದಿಲ್ಲ. ಪೊಲೀಸ್ ದಾಖಲಾತಿಗೆ ಎರಡು ಸಹಿಗಳನ್ನು ಮಾಡುವ ಪೂರ್ವದಲ್ಲಿ ನನಗೆ ಪೊಲೀಸರು ಯಾವುದೇ ನೋಟೀಸ್ ನೀಡಿರುವುದಿಲ್ಲ.

ಪೊಲೀಸರು ನನ್ನ ಸಮಕ್ಷಮ ಮೊಬೈಲ್ ಪೋನನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸದರಿ ಮೊಬೈಲ್ ಪೋನ್ ಯಾವ ಕಂಪೆನಿಗೆ ಸೇರಿರುತ್ತದೆ ಎಂದು ನಾನು ಗಮನಿಸಿರುವುದಿಲ್ಲ. ದಿನಾಂಕ 17.07.2022 ರಂದು ಪೊಲೀಸರು ಮಧ್ಯಾಹ್ನ 3-00 ಗಂಟೆಗೆ ಮೊಬೈಲ್ ಪೋನ್ ಅಮಾನತುಪಡಿಸಿಕೊಂಡಿರುತ್ತಾರೆ. ಸದರಿ ಮೊಬೈಲ್ ಪೋನ್ ಬಣ್ಣ ನನಗೆ ನೆನಪಿಲ್ಲ. ಪೊಲೀಸರು ನನ್ನ ಸಮಕ್ಷಮ ಸದರಿ ಪೋನಿನ ಮೋಡೆಲ್ ನಂಬರ್ ಪರಿಶೀಲನೆ ಮಾಡಿರುತ್ತಾರೆ. ಸದರಿ ಪೋನಿನ ಮೋಡೆಲ್ ನಂಬರ್ ನನಗೆ ಈಗ ನೆನಪಿಲ್ಲ. ನಾನು ಸಹಿ ಮಾಡಿರುವ ದಾಖಲಾತಿಯಲ್ಲಿ ಪೊಲೀಸರು ಸದರಿ ಪೋನಿನ ಮೋಡೆಲ್ ನಂಬರ್ ನ್ನು ಬರೆದಿರುತ್ತಾರೆ. ನಿಪಿ-6(ಎ) ಸಹಿಯು ಗೋಣಿಬೀಡು ಪೊಲೀಸ್ ಠಾಣೆ ಯಲ್ಲಿ ನಾನು ಹಾಕಿರುವ ಸಹಿ ಆಗಿರುತ್ತದೆ. ನಿಪಿ-6 ಮಹಜರಿನಲ್ಲಿ ಮೊಬೈಲ್ ಪೋನಿನ ಮೋಡೆಲ್ ನಂಬರ್ ಇರುವುದಿಲ್ಲ ಎಂದರೆ ಸಾಕ್ಷಿಯು ನಾನು ನಿಪಿ-6 ಮಹಜರನ್ನು ಓದಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-6 ರಲ್ಲಿ ಏನು ಬರೆದಿರುತ್ತದೆ ಎಂದು ಪೊಲೀಸರು ನನಗೆ ಓದಿ ಹೇಳಿರುವುದಿಲ್ಲ ಎಂದರೆ ಸರಿ. ಪೊಲೀಸರು ಸದರಿ ಮೊಬೈಲ್ ಪೋನನ್ನು ನನ್ನ ಸಮಕ್ಷಮ ಆರೋಪಿಯಿಂದಲೇ ಆಪರೇಟ್ ಮಾಡಿಸಿರುತ್ತಾರೆ. ಸದರಿ ಸಮಯದಲ್ಲಿ ಪೋನ್ ಚಾಲನೆ ಮಾಡುವ ಸ್ಥಿತಿಯಲ್ಲಿ ಇತ್ತು. ಪೊಲೀಸರು ಆರೋಪಿಯ ಬಳಿ ಪೋನ್ ಮೂಲಕ ಹಣವನ್ನು ಹೇಗೆ ತೆಗೆದಿರುತ್ತೀಯಾ ಎಂದು ವಿಚಾರಿಸಿರುತ್ತಾರೆ. ಸದರಿ ಪೋನ್‌ಲ್ಲಿ ಎರಡು ಸಿಮ್ ಗಳನ್ನು ಹಾಕುವ ವ್ಯವಸ್ಥೆ ಇತ್ತು. ಸದರಿ ಪೋನ್ ನಲ್ಲಿ ಎಷ್ಟು ಸಿಮ್‌ಗಳು ಇದ್ದು ಎಂದು ನಾನು ಗಮನಿಸಿರುವುದಿಲ್ಲ. ಪೋನ್ ಸಿಮ್‌ನ ಆಧಾರದಲ್ಲಿ ಸದರಿ ಪೋನ್‌ನ ನಂಬರನ್ನು ಹೇಳಲು ಸಾಧ್ಯವಾಗುತ್ತದೆ ಎಂದರೆ ಸರಿ. ನಾನು ನೋಡಿರುವ ಪೋನ್ ಸಿಮ್ ನಂಬರ್ ಏನು ಎಂದು ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಓ.

ದಿನಾಂಕಃ 06.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು ಶ್ರೀ ಕೆ.ಎಂ.ಪಿ ವಕೀಲರಿಂದ – ಆರೋಪಿತನ ಪರವಾಗಿ</u>

6. ದಿಃ 17.07.2022 ರಂದು ಆದ ಮಹಜರ್ ಗೆ ಒಟ್ಟು ಎಷ್ಟು ಜನ ಸಹಿ ಮಾಡಿದ್ದರು ಎಂದು ಹೇಳಲು ಆಗುವುದಿಲ್ಲ. ಆ ಮಹಜರ್ ಗೆ ಚಾಸಾ.6 ಆನಂದ್ ರವರು ಸಹಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಈಗ ನ್ಯಾಯಾಲಯದ ಮುಂದೆ ನೋಡುತ್ತಿರುವ ಮೊಬೈಲ್ ಆ ದಿನ ವಶಪಡಿಸಿಕೊಂಡಾಗಲು ಸಹ ಅದೇ ರೀತಿ ಇತ್ತು. ನ್ಯಾಯಾಲಯದ ಮುಂದಿರುವ ಮೊಬೈಲ್ ಅನ್ನು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಅದರ ಮೇಲೆ "ಪಿ" ಎಂಬ ಅಕ್ಷರವನ್ನು ಬರೆದಿರುವುದು ಕಂಡು ಬರುತ್ತಿಲ್ಲ ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಮೊಬೈಲ್ ಅನ್ನು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಅದರ ಮೇಲೆ "ಪಿ" ಎಂಬ ಅಕ್ಷರವನ್ನು ಬರೆಯದ ಕಾರಣ ದಿಃ 17.07.2022 ರಂದು ವಶಪಡಿಸಿಕೊಂಡ ಮೊಬೈಲ್ ಇದೇ ಮೊಬೈಲ್ ಆಗಿತ್ತು ಎಂದು ನನ್ನಿಂದ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿ ಇದೇ ಮೊಬೈಲ್ ಆಗಿತ್ತು ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂದಿರುವ ಮೊಬೈಲ್ ಚಾಲನಾ ಸ್ಥಿತಿಯಲ್ಲಿ ಇಲ್ಲ, ಅದನ್ನು ಉಪಯೋಗಿಸಲು ಆಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಮೊಬೈಲ್ ಈ ಕೇಸಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ಆ ಮೊಬೈಲ್ ಈ ಕೇಸಿಗೆ ಸಂಬಂಧಿಸಿಲ್ಲ ಎಂದು ಒಪ್ಪಿಕೊಂಡರೆ ಈ ಕೇಸಿಗೆ ತೊಂದರೆ ಆಗುತ್ತದೆ ಎಂಬ ಕಾರಣದಿಂದ ನಾನು ಆ ರೀತಿ ಒಪ್ಪಿಕೊಳ್ಳುತ್ತಿಲ್ಲ ಎಂದರೆ ಸರಿಯಲ್ಲ.

7. ನಿ.ಪಿ.8 ಮಹಜರ್ ಅನ್ನು ಮಾಡಿದ ಕಾಲದಲ್ಲಿ ಎಷ್ಟು ಜನ ಹಾಜರಿದ್ದರು ಎಂದು ಹೇಳಲು ಆಗುವುದಿಲ್ಲ. ನಿ.ಪಿ8 ಮಹಜರ್ ಗೆ ಆ ದಿನ ಎಷ್ಟು ಜನ ಎಷ್ಟು ಸಹಿ ಮಾಡಿದ್ದರು ಎಂದು ಹೇಳಲು ಆಗುವುದಿಲ್ಲ. ನಿ.ಪಿ.8 ಮಹಜರ್ ಗೆ ಚಾಸಾ.6 ಆನಂದ್ ರವರು ಸಹಿ ಮಾಡಿದ್ದರೋ ಇಲ್ಲವೋ ಎಂದು ಹೇಳಲು ಆಗುವುದಿಲ್ಲ. ಆ ದಿನ ಪೊಲೀಸರು 500 ಮುಖ ಬೆಲೆಯ ನೋಟುಗಳನ್ನು ವಶಕ್ಕೆ ಪಡೆದರು. ನಿ.ಪಿ.8 ಮಹಜರ್ ನಲ್ಲಿ ಆ ದಿನ ಪೊಲೀಸರು 500 ಮುಖ

ಬೆಲೆಯ ನೋಟುಗಳನ್ನು ವಶಕ್ಕೆ ಪಡೆದರು ಎಂದು ಬರೆದಿದ್ದಾರೋ ಇಲ್ಲವೋ ಎಂದು ಹೇಳಲು ಆಗುವುದಿಲ್ಲ. ನಿ.ಪಿ.8 ರಂತೆ ಪೊಲೀಸರು ಆ ದಿನ ಮಹಜರ್ ಕ್ರಮ ಜರುಗಿಸಿ ಹಣವನ್ನು ವಶಪಡಿಸಿಕೊಂಡಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ಪೊಲೀಸರು ಆ ದಿನ ಹಣವನ್ನು ಲೆಕ್ಕಾ ಮಾಡಿ ಅವರ ಸಮುಖದಲ್ಲಿ ವಶಕ್ಕೆ ಪಡೆದರು. ವಶ ಪಡಿಸಿಕೊಂಡ ಹಣದ ಮೇಲೆ ಚೀಟಿಯನ್ನು ಅಂಟಿಸಿ ಹಣಗಳ ವಿವರವನ್ನು ಬರೆದ ಬಗ್ಗೆ ನನಗೆ ಮಾಹಿತಿ ಇಲ್ಲ.

9. ದಿಃ 30.07.2022 ರಂದು ಪೊಲೀಸರು ನಿ.ಪಿ.2 ರಂತೆ ಮಹಜರ್ ಮಾಡಿದಾಗ ಚಾಸಾ.1 ಪಾರ್ವತಮ್ಮ ರವರು ನ್ಯಾಯಾಲಯದಿಂದ ಮಾಡಿದ ಆದೇಶವನ್ನು ಹಾಜರು ಪಡಿಸಿದ್ದರು. ನ್ಯಾಯಾಲಯದ ಆದೇಶದಲ್ಲಿ ಏನೆಲ್ಲಾ ಬರೆದಿತ್ತು ಎಂದು ನಾನು ಓದಿ ನೋಡಿಲ್ಲ. ಸಾಕ್ಷಿಗೆ ನ್ಯಾಯಾಲಯದ ಕಡತದಿಂದ ಹಣ ಬಿಡುಗಡೆ ಆದೇಶದ ಪ್ರತಿಯನ್ನು ತೋರಿಸಿ ಆ ದಾಖಲೆಯಲ್ಲಿ ಏನು ಬರೆದಿದೆ ಎಂದು ನಿಮಗೆ ಹೇಳಲು ಆಗುತ್ತದೆ ಎಂದರೆ ಸಾಕ್ಷಿ ನನಗೆ ತಾತ್ಕಾಲಿಕವಾಗಿ ಆ ದಾಖಲೆಯನ್ನು ನೋಡಿ ಓದಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಒಂದು ವರ್ಷಗಳಿಂದ ಓದುವ ತೊಂದರೆ ಇರುತ್ತದೆ. ನಾನು ವೈದ್ಯರ ಬಳಿ ಚಿಕಿತ್ಸೆಯನ್ನು ಕಣ್ಣುಗಳಿಗೆ ಸಂಬಂಧಿಸಿದಂತೆ ಪಡೆದಿಲ್ಲ. ಪೊಲೀಸರು ನಿ.ಪಿ.2 ಮಹಜರ್ ನಂತೆ ಹಣವನ್ನು ಬಿಡುಗಡೆ ಮಾಡುವಾಗ ಆ ಹಣವನ್ನು ನ್ಯಾಯಾಲಯ ಕೇಳಿದಾಗ ಹಾಜರು ಪಡಿಸಬೇಕು ಎಂದು ಪೊಲೀಸರು ತಿಳಿಸಿದ್ದರು ಎಂದರೆ ಸರಿ.

10. ಚಾಸಾ.1 ರವರಿಗೆ ಹಣವನ್ನು ಬಿಡುಗಡೆ ಮಾಡುವಾಗ ಅದನ್ನು ಲೆಕ್ಕಾ ಹಾಕಿದ್ದರು. ಹಣವನ್ನು ಬಿಡುಗಡೆ ಮಾಡುವಾಗ ಸಿ.ಡಿ ಯನ್ನು ತಯಾರು ಮಾಡಿದ್ದು ನನಗೆ ನೆನಪಿಲ್ಲ. ಸಿ.ಡಿ ಯನ್ನು ತಯಾರು ಮಾಡಿದ್ದೇವೆ ಎಂದು ನಿ.ಪಿ.2 ಮಹಜರ್ ನಲ್ಲಿ ಬರೆದಿರುವ ಬಗ್ಗೆ ನನಗೆ ನೆನಪಿಲ್ಲ. ಹಣವನ್ನು ಬಿಡುಗಡೆ ಮಾಡಿದಾಗ ಸಿ.ಡಿ ಯನ್ನು ಪೊಲೀಸರು ಮಾಡಿದ್ದರು ಎಂಬ ಬಗ್ಗೆ ಸಿ.ಡಿ ಯನ್ನು ನಾನು ನ್ಯಾಯಾಲಯದಲ್ಲಿ ನೋಡಿರುವುದಿಲ್ಲ. ನಿ.ಪಿ.2

ಮಹಜರ್ ಅನ್ನು ನಾನು ಆ ದಿನ ಓದಿ ನೋಡಲಿಲ್ಲ, ಪೊಲೀಸರು ಸಹ ನನಗೆ ಓದಿ ತಿಳಿಸಲಿಲ್ಲ.

11. ಚಾಸಾ.1 ರವರು ಈ ಕೇಸಿನ ವಿಚಾರವನ್ನು ನನಗೆ ದಿಃ 17.07.2022 ರಂದು ಬೆಳಿಗ್ಗೆ ತಿಳಿಸಿದ್ದರು. ಪೊಲೀಸರು ನ್ಯಾಯಾಲಯದ ಮುಂದಿರುವ ಮೊಬೈಲ್ ಅನ್ನು ನನ್ನ ಸಮಕ್ಷಮ ಪಡೆಯದೇ ಇದ್ದರು ಪಡೆದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮೊಬೈಲ್ ಡಮ್ಮಿ ಮೊಬೈಲ್ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ಮಹಜರ್ ಕ್ರಮವನ್ನು ಜರುಗಿಸಿ ಪೊಲೀಸರು ಹಣವನ್ನು ವಶಕ್ಕೆ ಪಡೆದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗೆ ಸೇರಿದ ಹಣವನ್ನು ಪೊಲೀಸರು ಬಲವಂತವಾಗಿ ವಶಕ್ಕೆ ಪಡೆದ ದಾಖಲೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಸೇರಿದ ಹಣವನ್ನು ಪೊಲೀಸರು ವಶಕ್ಕೆ ಪಡೆದು ತಯಾರಿಸಿದ ಮಹಜರ್ ಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

12. ಪೊಲೀಸರು ನನ್ನ ಸಮಕ್ಷಮ ಹಣವನ್ನು ಬಿಡುಗಡೆ ಮಾಡದೇ ಇದ್ದರು ಸಹ ನಾನು ಹಾಜರಿದ್ದಾಗ ಪೊಲೀಸರು ಆ ಹಣವನ್ನು ಬಿಡುಗಡೆ ಮಾಡಿದ್ದಾರೆ ಎಂದು ಚಾಸಾ.1 ರವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮಹಜರ್ ಕಾಲದಲ್ಲಿ ಹಾಜರು ಇಲ್ಲದೇ ಇದ್ದರು ಸಹ ಹಾಜರಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.3 ರಿಂದ 5, 7, 9 ರಿಂದ 12 ಛಾಯಚಿತ್ರಗಳು ಮಹಜರ್ ಕಾಲದಲ್ಲಿ ತೆಗೆದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಧನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ